# ದಿನಾಂಕ 19-12-2020 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್-88 ರ ಕೋಡಿಹಳ್ಳಿ ಸರ್ಕಾರಿ ಶಾಲೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

ವಾರ್ಡ್ ಸಂಖ್ಯೆ-88 ಜೀವನ್‌ಭೀಮಾನಗರದ ಕೋಡಿಹಳ್ಳಿ ಸರ್ಕಾರಿ ಶಾಲೆಯಲ್ಲಿ, ದಿನಾಂಕ : 19.12.2020 ರಂದು ಬೆಳಿಗ್ಗೆ 11.00 ಗಂಟೆಗೆ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ನಿಯೋಜಿಸಿರುವ ವಾರ್ಡ್‌ನ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ, ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ಈ ಕೆಳಕಂಡಂತೆ ಸದಸ್ಯರು ಸಭೆಯಲ್ಲಿ ಭಾಗವಹಿಸಿರುತ್ತಾರೆ.

## ಸಭೆಗೆ ಹಾಜರಿದ್ದ ಸದಸ್ಯರು ಹಾಗೂ ಅಧಿಕಾರಿಗಳು

1. ಶ್ರೀ.ಡಾ॥ನಾಗರಾಜು.ಎಸ್ –ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು, ವಾರ್ಡ್-88.
2. ಶ್ರೀ.ಸಿ.ಲಿಂಗರಾಜೇಗೌಡ– ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿ.
3. ಶ್ರೀ.ಶ್ರೀನಿವಾಸಲು – ಹಿರಿಯ ಆರೋಗ್ಯ ಪರಿವೀಕ್ಷಕರು
4. ಶ್ರೀ.ಹನುಮಂತಪ್ಪ – ಕಿರಿಯ ಘನತ್ಯಾಜ್ಯ ಪರಿವೀಕ್ಷಕರು
5. ಶ್ರೀ.ಲೋಹಿತ್ – ಎಇ, ಬಿಡಬ್ಲ್ಯೂಎಸ್‌ಎಸ್‌ಬಿ
6. ಶ್ರೀಮತಿ.ಪ್ರಭಾ – ಸ.ಅ, ಬೆಸ್ಕಾಂ
7. ಶ್ರೀ.ಮೂರ್ತಿ – ತೆರಿಗೆ ನಿರೀಕ್ಷಕರು
8. ಶ್ರೀ.ಚಂದ್ರಶೇಖರ್ – ತೆರಿಗೆ ನಿರೀಕ್ಷಕರು
9. ಶ್ರೀ.ದೇವರಾಜ್ – ಅರಣ್ಯ ಇಲಾಖೆ (ಸೂಪರ್‌ವೈಸರ್)
10. ಶ್ರೀ.ಧನಂಜಯ – ಪಿಎಸ್‌ಐ, ಜೆಬಿಎನ್ ಸಂಚಾರಿ ಪೋಲೀಸ್ ಠಾಣೆ
11. ಶ್ರೀ.ಸತೀಶ್ – ಎಎಸ್‌ಐ, ಜೆಬಿಎನ್ ಪೋಲೀಸ್ ಠಾಣೆ
12. ಶ್ರೀ.ಚಂದ್ರಶೇಖರ್ – ಯುಎಫ್‌ಡಬ್ಲೂ ವತಿ ಕಂಟ್ರಾಕ್ಟರ್
13. ಶ್ರೀ.ಲಾಲ್ ಸಾಹೇಬ್ – ಮಾರ್ಷಲ್, ಬಿಬಿಎಂಪಿ
14. ಶ್ರೀ.ಚಂದ್ರ – ಸದಸ್ಯರು
15. ಶ್ರೀ.ಜ್ಯೋತಿರಾಮಲಿಂಗಂ – ಸದಸ್ಯರು
16. ಶ್ರೀ.ಮಧು – ಸದಸ್ಯರು
17. ಶ್ರೀ.ಪಾಲ್ ಅಮಲ್‌ರಾಜ್ – ಸದಸ್ಯರು
18. ಶ್ರೀ.ಶ್ರೀನಿವಾಸ್ – ಸದಸ್ಯರು
19. ಶ್ರೀ.ಜಗನ್ನಾಥ್ – ಸದಸ್ಯರು
20. ಶ್ರೀ.ನವೀನ್ – ಸದಸ್ಯರು

ಪ್ರಥಮವಾಗಿ ವಾರ್ಡ್ ಕಾರ್ಯದರ್ಶಿಗಳು ಹಾಗೂ ಸಂಚಾಲಕರು ಆದ ಶ್ರೀ.ಲಿ.ಲಿಂಗರಾಜೇಗೌಡರವರು ಸಭೆಗೆ ಆಗಮಸಿದ್ದ ಎಲ್ಲಾ ಅಧಿಕಾರಿಗಳು, ಸದಸ್ಯರು ಮತ್ತು ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಿದರು. ಹಿಂದಿನ ಸಭೆಯ ನಡವಳಿಗಳನ್ನು ಓದಿ ತಿಳಿಸಿದರು. ಹಾಗೂ ಇಂದಿನ ಸಭೆಯ ಅಜೆಂಡಾ ಹಾಗೂ ಸಾರ್ವಜನಿಕರ ಕುಂದುಕೊರತೆಗಳ ಬಗ್ಗೆ ಸಭೆಗೆ ಮಾಹಿತಿ ನೀಡುವಂತೆ ಕೋರಿದರು.

ಘನತ್ಯಾಜ್ಯ ನಿರ್ವಹಣೆ :

- ವಾರ್ಡ್‌ನಲ್ಲಿರುವ ಒಣ ತ್ಯಾಜ್ಯ ಸಂಗ್ರಹಣಾ ಘಟಕದ ನಿರ್ವಹಣೆಯನ್ನು ಮೆ.ಐಟಿಸಿ ಪ್ರೈ.ಲಿಮಿಟೆಡ್ ರವರಿಗೆ ನೀಡಲಾಗಿದ್ದು, ಬುಧವಾರ ಮತ್ತು ಶನಿವಾರಗಳಂದು ಒಣತ್ಯಾಜ್ಯ ಸಂಗ್ರಹಣೆಯನ್ನು ಸಮರ್ಪಕವಾಗಿ ಕೈಗೊಳ್ಳುವಂತೆ ನೋಡಿಕೊಳ್ಳಲು ಮಾನ್ಯ ಅಧ್ಯಕ್ಷರು, ಘನತ್ಯಾಜ್ಯ ವಿಭಾಗದ ಅಧಿಕಾರಿಗಳಿಗೆ ಸೂಚಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿನ ಸುರಂಜನ್ ದಾಸ್ ರಸ್ತೆಯ ಬಳಿ, ಸಂಚಾರಿ ಪೊಲೀಸ್ ಠಾಣೆಯ ಹಿಂಭಾಗದ ರಸ್ತೆಯಲ್ಲಿ, ಬಾಬಾ ಸಾಹೇಬ್ ಕಾಲೋನಿಯಲ್ಲಿ ಮತ್ತು ಇನ್ನಿತರ ಕಡೆಗಳಲ್ಲಿ ಬ್ಲಾಕ್ ಸ್ಪಾಟ್‌ಗಳನ್ನು ತೆರವುಗೊಳಿಸಲಾಗಿರುತ್ತದೆ ಎಂದು ಕಿರಿಯ ಘನತ್ಯಾಜ್ಯ ಪರಿವೀಕ್ಷಕರು ಸಭೆಗೆ ಓದಿ ಹೇಳಿದರು.
- ಸುರಂಜನ್ ದಾಸ್ ರಸ್ತೆ ಬಳಿ ಕಸ ಮತ್ತು ಡೆಬ್ರಿಸ್‌ನ್ನು ತೆಗೆದು ಸುಂದರವಾಗಿ ಇಟ್ಟುಕೊಳ್ಳಲು ಅಧ್ಯಕ್ಷರು ಸೂಚಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಹೊಸದಾಗಿ ಉಂಟಾಗುವ ಬ್ಲಾಕ್ ಸ್ಪಾಟ್‌ಗಳನ್ನು ಆಗಿಂದ್ದಾಗ್ಗೆ ತೆರವುಗೊಳಿಸಲು ಮಾನ್ಯ ಅಧ್ಯಕ್ಷರು ಸೂಚಿಸಿದರು.
- ರಸ್ತೆ ಬದಿಯಲ್ಲಿ ಕಸವನ್ನು ಹಾಕಿದರೆ ದಂಡವನ್ನು ವಿಧಿಸುವಂತೆ ಅದರೊಂದಿಗೆ ಎಫ್‌ಐಆರ್ ದಾಖಲಿಸುವಂತೆ ಸೂಚಿಸಿದರು.
- ಸಮರ್ಪಕವಾಗಿ ಕಸವಿಲೇವಾರಿ ಮಾಡುತ್ತಿಲ್ಲ ಆದುದರಿಂದ ಗುತ್ತಿಗೆದಾರರಿಗೆ ಪತ್ರ ಬರೆಯಲು ಅಧ್ಯಕ್ಷರು ಸೂಚಿಸಿದರು.
- ಡೆಬ್ರಿಸ್ ಕಸವನ್ನು ತೆಗೆದು ಸ್ವಚ್ಛಗೊಳಿಸಿ ಎಲ್ಲಾ ಬ್ಲಾಕ್‌ಸ್ಪಾಟ್‌ಗಳನ್ನು ಸುಂದರವಾಗಿ ಇಟ್ಟುಕೊಳ್ಳಲು ಅಧ್ಯಕ್ಷರು ತಿಳಿಸಿದರು.
- ಶ್ರೀ.ಜಗನ್ನಾಥ್ ಸದಸ್ಯರು ಮಾತನಾಡಿ ಹೆಚ್‌ಎಎಲ್ 15,16,17 ನೇ ಮುಖ್ಯರಸ್ತೆಗಳಲ್ಲಿ ಕಸವನ್ನು ಸಮರ್ಪಕವಾಗಿ ತೆಗೆಯುತ್ತಿಲ್ಲವೆಂದು ಹೇಳಿದರು. ಇದಕ್ಕೆ ಅಧ್ಯಕ್ಷರು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸಮರ್ಪಕವಾಗಿ ಕಸವನ್ನು ತೆಗೆಯಲು ಸೂಚಿಸಿದರು.

ಕಾಮಗಾರಿ ಇಲಾಖೆ :-

- ಅಧ್ಯಕ್ಷರು ಮಾತನಾಡಿ, ವಾರ್ಡ್ ವ್ಯಾಪ್ತಿಯಲ್ಲಿ ಈಗಾಗಲೇ ರಸ್ತೆ ಗುಂಡಿಗಳನ್ನು ಮುಚ್ಚಲಾಗುತ್ತಿದ್ದು, ಎಲ್ಲಾ ರಸ್ತೆಗಳಲ್ಲಿನ ರಸ್ತೆಗುಂಡಿಗಳನ್ನು ಸೂಕ್ತ ಕಾರ್ಯತಂತ್ರವನ್ನು ಮಾಡಿಕೊಂಡು ಸಾರ್ವಜನಿಕರಿಗೆ ಅನಾನುಕೂಲ ಉಂಟಾಗದಂತೆ ಮುಚ್ಚಲು ಹಾಗೂ ಡೆಬ್ರಿಸ್ ತೆರವುಗೊಳಿಸಲು ಮತ್ತು ಪಾದಚಾರಿ ಮಾರ್ಗದಲ್ಲಿ ಪಾದಚಾರಿ ಯಾವುದೇ ತೊಂದರೆಯಿಲ್ಲದಂತೆ ಓಡಾಡಲು ಅನುವಾಗುಂತೆ ಅಲ್ಲಲ್ಲಿ ಪಾದಚಾರಿ ಮಾರ್ಗದ ಮೇಲೆ ಜೋತು ಬಿದ್ದಿರುವ ಒಎಫ್‌ಸಿ ಕೇಬಲ್‌ಗಳನ್ನು ಸರಿಯಾದ ರೀತಿಯಲ್ಲಿ ಅಳವಡಿಸಲು ಸಂಬಂಧಪಟ್ಟ ಸಂಸ್ಥೆರವರಿಗೆ ಸೂಚಿಸಿ ಕ್ರಮವಹಿಸಲು ತಿಳಿಸಿದರು.
- 13ನೇ ಮುಖ್ಯರಸ್ತೆಯಲ್ಲಿ ನವನಗರೋತ್ಥಾನ ಅನುದಾನದ ಕಾಮಗಾರಿಯು ನಡೆಯುತ್ತಿದ್ದು, ಶೀಘ್ರವಾಗಿ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಮಾನ್ಯ ಅಧ್ಯಕ್ಷರು ಸಹಾಯಕ ಅಭಿಯಂತರರಿಗೆ ಮತ್ತೊಮ್ಮೆ ತಿಳಿಸಿದರು.

- ಆನಂದಪುರದ 10 ಮತ್ತು 13ನೇ ಅಡ್ಡರಸ್ತೆಗಳಲ್ಲಿ ಒಳಚರಂಡಿ ತೊಂದರೆಯಿದ್ದು, ಪೈಪ್‌ಗಳನ್ನು ಬದಲಾಯಿಸಿಕೊಡಲು ಸದಸ್ಯರಾದ ಶ್ರೀ.ಪಾಲ್ ಅಮಲ್‌ರಾಜ್‌ರವರು ಕೋರಿದರು. ಈ ಬಗ್ಗೆ ಸಂಬಂಧಪಟ್ಟ ಇಲಾಖೆಯವರಿಗೆ ಕ್ರಮವಹಿಸುವಂತೆ ಸೂಚಿಸಲಾಯಿತು.
- ಮಾನ್ಯ ಅಧ್ಯಕ್ಷರು ಮಾತನಾಡಿ, ಆನಂದಪುರದಲ್ಲಿ ಕುಡಿಯುವ ನೀರಿನ ಬಾಕಿ ಬಿಲ್‌ಗಳಿಗೆ ಸಂಬಂಧಿಸಿದಂತೆ ಪರಿಶೀಲನೆ ಮಾಡಲು ಬಿಡಬ್ಲ್ಯೂಎಸ್‌ಎಸ್‌ಬಿ ಎಇ, ಕೆಲಸ ಪರಿವೀಕ್ಷಕರು, ರಾಜೇಂದ್ರನ್-ಸಾರ್ವಜನಿಕರು, ಪಾಲ್ ಅಮಲ್‌ರಾಜ್-ಸದಸ್ಯರುರವರುಗಳನ್ನೊಳಗೊಂಡು ಸಮಿತಿ ರಚನೆ ಮಾಡಿ ಪರಿಶಿಲನೆ ಮಾಡುವಂತೆ ಸೂಚಿಸಿದರು.
- ಕೋಡಿಹಳ್ಳಿ 7ನೇ ಅಡ್ಡರಸ್ತೆಯಲ್ಲಿ ನೀರು ಸಮರ್ಪಕವಾಗಿ ಬರುತ್ತಿಲ್ಲದಿರುವುದರ ಬಗ್ಗೆ ಸಾರ್ವಜನಿಕರು ದೂರಿದರು. ಈ ಬಗ್ಗೆ ಪರಿಶೀಲನೆ ನಡೆಸುವಂತೆ ಬಿಡಬ್ಲ್ಯೂಎಸ್‌ಎಸ್‌ಬಿ ಅಧಿಕಾರಿಗಳಿಗೆ ಸೂಚಿಸಲಾಯಿತು.
- ಸಮಿತಿಯ ಸದಸ್ಯರಾದ ಶ್ರೀ.ಜ್ಯೋತಿರಾಮಲಿಂಗಂರವರು ಮಾತನಾಡಿ, ಆನಂದಪುರದ 6ನೇ ಮುಖ್ಯರಸ್ತೆಯಲ್ಲಿ ಕುಡಿಯುವ ನೀರು ಸಮರ್ಪಕವಾಗಿ ಪೂರೈಕೆ ಆಗುತ್ತಿಲ್ಲವೆಂದು ತಿಳಿಸಿದರು. ಈ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಬಿಡಬ್ಲ್ಯೂಎಸ್‌ಎಸ್‌ಬಿ ಅಧಿಕಾರಿಗಳು ತಿಳಿಸಿದರು.
- ವಾರ್ಡಿನಲ್ಲಿ ನೀರಿನ ಪೈಪ್ ಅಳವಡಿಕೆಗಾಗಿ ಅಗೆದಿರುವ ರಸ್ತೆಗಳನ್ನು ಶೀಘ್ರವಾಗಿ ಪುನರ್‌ನಿರ್ಮಾಣ ಮಾಡಿ ಸಾರ್ವಜನಿಕರಿಗೆ ಅನುಕೂಲ ಉಂಟುಮಾಡಲು ಮತ್ತೊಮ್ಮೆ ಮಾನ್ಯ ಅಧ್ಯಕ್ಷರು ಸೂಚಿಸಿದರು.
- ಹೆಚ್.ಎ.ಎಲ್ 3ನೇ ಹಂತದ, 11, 12 ಮತ್ತು 13ನೇ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದಾಗಿ ಶ್ರೀ.ಚಂದ್ರ, ಸದಸ್ಯರು ಹಿಂದಿನ ಸಭೆಯಲ್ಲಿ ತಿಳಿಸಿದ ವಿಷಯದ ಬಗ್ಗೆ ಮತ್ತೊಮ್ಮೆ ತಿಳಿಸಲಾಗಿ, ಈ ಬಗ್ಗೆ ಸಂಬಂಧಪಟ್ಟ ಬಿಡಬ್ಲ್ಯೂಎಸ್‌ಎಸ್‌ಬಿ ಇಲಾಖೆಯ ಅಭಿಯಂತರರು ಸಮಸ್ಯೆಯನ್ನು ಶೀಘ್ರವಾಗಿ ಪರಿಹರಿಸಲಾಗುವುದು ಎಂದು ತಿಳಿಸಿದರು.
- ಹೆಚ್.ಎ.ಎಲ್ 2ನೇ ಹಂತದ, 18ನೇ ಎ ಮುಖ್ಯರಸ್ತೆ, 3ನೇ, 4ನೇ ಮತ್ತು 5ನೇ ಅಡ್ಡರಸ್ತೆಗಳಲ್ಲಿ ಹೊಸದಾಗಿ ಒಳಚರಂಡಿ ಪೈಪ್ ಅಳವಡಿಸಲು ಸದಸ್ಯರಾದ ಶ್ರೀ.ವಿಜಯ್‌ರವರು ಕೋರಿರುತ್ತಾರೆ. ಈ ಬಗ್ಗೆ ಪರಿಶೀಲನೆ ಮಾಡಿ ಕ್ರಮವಹಿಸುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ತಿಳಿಸಿದರು.
- 7,8,9,10 ನೇ ಅಡ್ಡರಸ್ತೆಗಳಲ್ಲಿ ಮಧ್ಯರಾತ್ರಿ ನೀರು ಸರಬರಾಜು ಆಗುತ್ತಿದ್ದು ಇದರ ಬದಲು ಬೆಳಿಗ್ಗೆ ಸಮಯದಲ್ಲಿ ನೀರು ಸರಬರಾಜು ಮಾಡಲು ಕೋಡಿಹಳ್ಳಿ ಸಾರ್ವಜನಿಕರು ಕೋರಿದರು.
- ಕೋಡಿಹಳ್ಳಿ ಮುಖ್ಯರಸ್ತೆಯಲ್ಲಿರುವ ಒಳಚರಂಡಿ ವ್ಯವಸ್ಥೆ ಸಮರ್ಪಕವಾಗಿ ನಿರ್ವಹಿಸುತ್ತಿಲ್ಲವೆಂದು ಕೋಡಿಹಳ್ಳಿ ನಿವಾಸಿಗಳು ದೂರಿದರು. ಅದಕ್ಕೆ ಅಧ್ಯಕ್ಷರು ಒಳಚರಂಡಿ ವ್ಯವಸ್ಥೆಯನ್ನು ಸಮರ್ಪಕವಾಗಿ ನಿರ್ವಹಿಸುವಂತೆ ಮಾಡಲು ಅಥವಾ ಒಳಚರಂಡಿ ಪೈಪುಗಳನ್ನು ಬದಲಾಯಿಸಲು ಸೂಚಿಸಿದರು.

**ಬೀದಿ ದೀಪ ನಿರ್ವಹಣೆ :**

- ವಾರ್ಡಿನಲ್ಲಿ ಇರುವ ಬೀದಿದೀಪಗಳ ಬಗ್ಗೆ ಜಂಟಿಯಾಗಿ ಪರಿಶೀಲನೆ ನಡೆಸುವ ಕೆಲಸವು ಪ್ರಗತಿಯಲ್ಲಿರುವುದಾಗಿ ಕಂದಾಯ ಪರಿವೀಕ್ಷಕರು ತಿಳಿಸಲಾಗಿ, ಮುಂದಿನ ಸಭೆಯ ಒಳಗಾಗಿ ಪೂರ್ಣಗೊಳಿಸುವಂತೆ ಹಾಗೂ ಹೊಸದಾಗಿ ಅಗತ್ಯವಿರುವ ಕಡೆ ಬೀದಿ ದೀಪಗಳನ್ನು ಅಳವಡಿಸಲು ಮಾನ್ಯ ಅಧ್ಯಕ್ಷರು ಸೂಚಿಸಿದರು.
- ಬೀದಿದೀಪಗಳ ಜಂಟಿ ಪರಿಶೀಲನೆ ನಡೆಸುವ ಕಾರ್ಯವನ್ನು ಮುಂದಿನ ಸಭೆಯೊಳಗೆ ಪೂರ್ಣಗೊಳಿಸುವಂತೆ ಸೂಚಿಸಿದರು.
- ವಾರ್ಡಿನ 16 ನೇ 'ಬಿ' ಮುಖ್ಯರಸ್ತೆಯಲ್ಲಿ ಮತ್ತು ಕೆಲವು ರಸ್ತೆಗಳಲ್ಲಿ ಬೀದಿದೀಪಗಳ ನಿರ್ವಹಣೆ ಸರಿಯಿಲ್ಲ ಎಂದು ಕೋಡಿಹಳ್ಳಿ ನಿವಾಸಿಗಳು ದೂರಿದರು. ಅದಕ್ಕೆ ಅಧ್ಯಕ್ಷರು ಎಲ್ಲಾ ರಸ್ತೆಗಳ ಬೀದಿದೀಪಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡಲು ಸೂಚಿಸಿದರು
- ವಿಷ್ಣುವರ್ಧನ್ ಪಾರ್ಕ್ ಒಳಗಡೆ ಮತ್ತು ಹೊರಗಡೆ ದೀಪಗಳು ಇಲ್ಲವೆಂದು ನಿವಾಸಿಗಳು ದೂರಿದರು ಹಾಗೂ ಅನೈತಿಕ ಚಟುವಟಿಕೆಗಳು ನಡೆಯುತ್ತಿದ್ದು ಆದಷ್ಟು ಶೀಘ್ರವಾಗಿ ದೀಪಗಳನ್ನು ಅಳವಡಿಸಲು ಕೋರಿದರು. ಅಧ್ಯಕ್ಷರು ಆದಷ್ಟು ಬೇಗ ದೀಪಗಳನ್ನು ಅಳವಡಿಸಲು ಸೂಚಿಸಿದರು.

**ಬೆಸ್ಕಾಂ :**

- ಆನಂದಪುರದಲ್ಲಿ ಹಲವು ಕಡೆಗಳಲ್ಲಿ ಬೀದಿ ದೀಪಗಳ ಸುಮಾರು 30 ಕಂಬಗಳು ತುಂಬಾ ಹಳೆಯದಾಗಿದ್ದು, ಸದರಿ ಕಂಬಗಳನ್ನು ಬದಲಾಯಿಸಲು ಕೋರಿರುತ್ತಾರೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಲಾಗಿ, ಸದರಿಯವರು ಮಾತನಾಡಿ ಈ ಬಗ್ಗೆ ಕ್ರಮವಹಿಸಲಾಗುವುದು ಹಾಗೂ ಸದರಿ ಸ್ಥಳಗಳಲ್ಲಿನ ರಸ್ತೆಗಳು ತುಂಬಾ ಕಿರಿದಾಗಿದ್ದು, ದೊಡ್ಡ ವಾಹನ(ಕ್ರೇನ್) ಹೋಗದ ಕಾರಣ ಕಾಲಾವಕಾಶದ ಅಗತ್ಯವಿರುತ್ತದೆ ಎಂದು ತಿಳಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಬೆಸ್ಕಾಂ ವತಿಯಿಂದ ಹಲವಾರು ರಸ್ತೆಗಳಲ್ಲಿ ರಸ್ತೆ ಅಗೆತ ಮಾಡಿ ಕೇಬಲ್‌ಗಳನ್ನು ರಸ್ತೆಯಲ್ಲಿಯೇ ಬಿಟ್ಟಿರುವ ಬಗ್ಗೆ ಹಿಂದಿನ ಸಭೆಯಲ್ಲಿಯೇ ತಿಳಿಸಲಾಗಿದ್ದು, ಇದರಿಂದ ರಸ್ತೆಯಲ್ಲಿ ಓಡಾಡುವ ಸಾರ್ವಜನಿಕರಿಗೆ ಹಾಗೂ ವಾಹನ ಸವಾರರಿಗೆ ಅಪಘಾತ ಉಂಟಾಗುವ ಸಾಧ್ಯತೆ ಇರುವ ಬಗ್ಗೆ ಶ್ರೀ.ರಾಮಕೃಷ್ಣರವರು ದೂರಿದರು. ಇದಕ್ಕೆ ಸಮಿತಿಯ ಅಧ್ಯಕ್ಷರು ಮಾತನಾಡಿ, ಸದರಿ ರಸ್ತೆಗಳನ್ನು ಸಾರ್ವಜನಿಕರಿಗೆ ಓಡಾಡಲು ಅನುಕೂಲವಾಗುವಂತೆ ಶೀಘ್ರವೇ ಪುನರ್ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮತ್ತೊಮ್ಮೆ ಸೂಚಿಸಿದರು.

**ಪೊಲೀಸ್ ಇಲಾಖೆ :**

- ಸಮಿತಿಯ ಸದಸ್ಯರಾದ ಶ್ರೀ.ಸದಾಶಿವನ್ ರವರು ಮಾತನಾಡಿ, ದೊಮ್ಮಲೂರು ಫ್ಲೈಓವರ್‌ನ ಕೆಳಭಾಗದ ಪ್ರದೇಶದಲ್ಲಿ ಕೆಲವು ವ್ಯಕ್ತಿಗಳು ಅನೈತಿಕ ಚುಟುವಟಿಕೆಗಳನ್ನು ನಡೆಸುತ್ತಿರುತ್ತಾರೆ ಅವುಗಳನ್ನು ನಿಯಂತ್ರಿಸುವಂತೆ ಮತ್ತೊಮ್ಮೆ ಕೋರಿದರು. ಈ ಬಗ್ಗೆ ಪರಿಶೀಲನೆ ನಡೆಸುತ್ತಿರುವುದಾಗಿ ಸಭೆಯಲ್ಲಿ ಹಾಜರಿದ್ದ ಪೊಲೀಸ್ ಅಧಿಕಾರಿಗಳು ತಿಳಿಸಿದರು.
- ಹಿಂದಿನ ಸಭೆಯಲ್ಲಿ ಅಧ್ಯಕ್ಷರು ಜೀವನ್‌ಭೀಮಾನಗರ ಮುಖ್ಯರಸ್ತೆ, ಜೀವನ್‌ಭೀಮಾನಗರ ಬಸ್‌ಸ್ಟ್ಯಾಂಡ್ ರಸ್ತೆ, 80 ಅಡಿ ರಸ್ತೆ ಇಸ್ರೋ ಜಂಕ್ಷನ್ ಮತ್ತು ದೊಮ್ಮಲೂರು ಫ್ಲೈ ಓವರ್ ಕೆಳಭಾಗದಲ್ಲಿ ಪಾದಚಾರಿ ಮಾರ್ಗಗಳ ಮೇಲೆ ನಿಲ್ಲಿಸಿರುವ ಹಳೆಯ ವಾಹನಗಳನ್ನು

- 13ನೇ ಮುಖ್ಯರಸ್ತೆಯಲ್ಲಿ ಕಾಮಗಾರಿ ಪ್ರಾರಂಭವಾಗಿರುವುದರಿಂದ ಬಿಡಬ್ಲ್ಯೂಎಸ್ಎಸ್‌ಬಿ ವತಿಯಿಂದ ಯಾವುದಾದರೂ ಪೈಪ್ ಅಳವಡಿಕೆ ಅಥವಾ ಬೆಸ್ಕಾಂ ರವರ ವತಿಯಿಂದ ಕೇಬಲ್ ಅಳವಡಿಕೆ ಮುಂತಾದ ಕೆಲಸಗಳನ್ನು ಇದ್ದಲ್ಲಿ ಸದರಿ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿಕೊಂಡು ಕಾಮಗಾರಿ ಪೂರ್ಣಗೊಳಿಸಲು ಅಧ್ಯಕ್ಷರು ಸೂಚಿಸಿದರು.

- ವಾರ್ಡಿನ ಎಲ್ಲಾ 324 ರಸ್ತೆಗಳಲ್ಲಿಯೂ ರಸ್ತೆ ಬದಿ ಡೆಬ್ರಿಸ್, ತ್ಯಾಜ್ಯಗಳನ್ನು ಸೂಕ್ತ ಕಾರ್ಯತಂತ್ರವನ್ನು ರೂಪಿಸಿಕೊಂಡು 3–4 ತಿಂಗಳುಗಳಲ್ಲಿ ಎಲ್ಲಾ ರಸ್ತೆಗಳಲ್ಲಿಯೂ ತೆರವುಗೊಳಿಸಲು ಸೂಚಿಸಿದರು.
- 17ನೇ ಎ ಮುಖ್ಯರಸ್ತೆ, ಹೆಚ್.ಎ.ಎಲ್ 2ನೇ ಹಂತ ಇಲ್ಲಿ ರಸ್ತೆ ನಿರ್ಮಾಣ ಕೆಲಸ ಮಾಡಲು ಸಭೆಯಲ್ಲಿದ್ದ ಶ್ರೀಮತಿ.ಪಾರ್ವತಿ–ಸಾರ್ವಜನಿಕರು ಕೋರಿದರು. ಇದಕ್ಕೆ ವಾರ್ಡಿನ ಸಹಾಯಕ ಅಭಿಯಂತರರು ಉತ್ತರಿಸಿ, ಸದರಿ ರಸ್ತೆಯ ನಿರ್ಮಾಣ ಕೆಲಸವನ್ನು ಕೈಗೊಳ್ಳಲು ಪ್ರಸ್ತುತ ಪ್ರಾರಂಭವಾಗಿರುವ ನವನಗರೋತ್ಥಾನ ಅನುದಾನದ ಕಾಮಗಾರಿಯಲ್ಲಿ ಅಳವಡಿಸಕೊಳ್ಳಲಾಗಿದ್ದು, ಶೀಘ್ರದಲ್ಲಿ ರಸ್ತೆ ನಿರ್ಮಾಣ ಮಾಡಲಾಗುವುದು ಎಂದು ತಿಳಿಸಿದರು.
- ಕೋಡಹಳ್ಳಿ ವೃತ್ತದ ಬಳಿ ಕಾನೂನು ಬಾಹಿರ ಚಟುವಟಿಕೆಗಳು ಹೆಚ್ಚಾಗಿದ್ದು, ಸಿಸಿ ಕ್ಯಾಮೆರಾಗಳನ್ನು ಅಳವಡಿಸುವಂತೆ ಸಾರ್ವಜನಿಕರು ಕೋರಿರುತ್ತಾರೆ. ಈ ಬಗ್ಗೆ ಅನುದಾನದ ಲಭ್ಯತೆಯನ್ನು ಪರಿಶೀಲಿಸಿಕೊಂಡು ಕ್ರಮ ಕೈಗೊಳ್ಳುವುದಾಗಿ ಅಭಿಯಂತರರು ತಿಳಿಸಿದರು.
- ಶ್ರೀ.ಜಗನ್ನಾಥ್, ಸದಸ್ಯರು ಮಾತನಾಡಿ, 15ನೇ ಮುಖ್ಯರಸ್ತೆ, ಹೆಚ್.ಎ.ಎಲ್ 2ನೇ ಹಂತದಲ್ಲಿ ರಸ್ತೆ ನಿರ್ಮಾಣ ಮಾಡಲು ಕೋರಿರುತ್ತಾರೆ. ಇದಕ್ಕೆ ಅಭಿಯಂತರರು ಮಾತನಾಡಿ ನವನಗರೋತ್ಥಾನ ಕಾಮಗಾರಿಯನ್ನು ಸದರಿ ಕೆಲಸವನ್ನು ಅಳವಡಿಸಿಕೊಳ್ಳಲಾಗಿದ್ದು, ಶೀಘ್ರವಾಗಿ ಕೈಗೊಳ್ಳಲಾಗುವುದು ಎಂದು ತಿಳಿಸಿದರು.
- ಮತ್ತೊಮ್ಮೆ ವಾರ್ಡ್ ವ್ಯಾಪ್ತಿಯಲ್ಲಿ ಬರುವ ರಸ್ತೆ ಗುಂಡಿಗಳನ್ನು ಮುಚ್ಚಲು ಸೂಚಿಸಿದರು ಹಾಗೂ ಕೋಡಿಹಳ್ಳಿ ವೃತ್ತದ ಬಳಿ, ಆನಂದಪುರ ಸುಧಾಮನಗರ ಮತ್ತು ಬಾಬಾಸಾಹೇಬ್ ಕಾಲನಿ ಹಾಗೂ ಇನ್ನಿತರ ಪ್ರದೇಶಗಳಲ್ಲಿ ಅನೈತಿಕ ಚಟುವಟಿಕೆಗಳು ನಡೆಯುತ್ತಿರುವ ಸ್ಥಳಗಳಲ್ಲಿ ಸಿಸಿಕ್ಯಾಮೆರಾ ವನ್ನು ಅಳವಡಿಸಲು ಸೂಚಿಸಿದರು.
- ಕೋಡಿಹಳ್ಳಿ ಸ್ಮಶಾನದ ಹತ್ತಿರ ಮತ್ತು ಒಳಗಡೆ ಸ್ವಚ್ಛಗೊಳಿಸಿ ಸಿಸಿಕ್ಯಾಮೆರಾ ಅಳವಡಿಸಲು ಅಧ್ಯಕ್ಷರು ಸೂಚಿಸಿದರು.

**ನೀರು ಮತ್ತು ಒಳಚರಂಡಿ :–**

- 13ನೇ ಮುಖ್ಯರಸ್ತೆಯಲ್ಲಿ ಕುಡಿಯುವ ನೀರು ಸಮರ್ಪಕವಾಗಿ ಸರಬರಾಜು ಆಗುತ್ತಿಲ್ಲವೆಂದು ಹಾಗೂ ಪೈಪ್‌ನಿಂದ ನೀರು ಸೋರಿಕೆಯಾಗುತ್ತಿದೆ ಎಂಬುದಾಗಿ ಶ್ರೀಮತಿ.ಮಮತಾ ಅಡಿಗರವರು ದೂರಿದರು. ಈ ಬಗ್ಗೆ ಸಂಬಂಧಪಟ್ಟ ಇಲಾಖೆಯ ಅಭಿಯಂತರರಿಗೆ ಕ್ರಮವಹಿಸುವಂತೆ ಸೂಚಿಸಲಾಯಿತು.

ತೆರವುಗೊಳಿಸಲು ಸಂಬಂಧಪಟ್ಟ ಸಂಚಾರಿ ಪೋಲೀಸ್‌ರವರಿಗೆ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದ ಈಗಾಗಲೇ ಪೋಲೀಸ್ ಇಲಾಖೆಗೆ ಪತ್ರ ಬರೆಯಲಾಗಿದೆ ಎಂದು ಸಹಾಯಕ ಅಭಿಯಂತರರು ಸಭೆಗೆ ತಿಳಿಸಿದರು.

- ಸಮಿತಿಯ ಸದಸ್ಯರಾದ ಶ್ರೀ.ಚಂದ್ರರವರು ಮಾತನಾಡಿ, ವಾರ್ಡ್ ವ್ಯಾಪ್ತಿಯಲ್ಲಿ ಹಲವು ರಸ್ತೆಗಳಲ್ಲಿ ಏಕಮುಖ ಸಂಚಾರವನ್ನು ಮಾಡಲಾಗಿದ್ದು, ಇದರಿಂದ ವಾಹನ ಸವಾರರಿಗೆ ತೊಂದರೆಯಾಗುತ್ತಿದ್ದು, ಸದರಿ ನಿರ್ಧಾರವನ್ನು ಪುನರ್‌ಪರಿಶೀಲಿಸುವಂತೆ ಕೋರಿರುವ ವಿಷಯಕ್ಕೆ ಸಂಬಂಧಿಸಿದಂತೆ ಪೋಲೀಸ್ ಅಧಿಕಾರಿಗಳು ಮಾತನಾಡಿ ಹಳೆ ಏರ್‌ಪೋರ್ಟ್ ರಸ್ತೆಯಲ್ಲಿ ಅಂಡರ್‌ಪಾಸ್ ಕಾಮಗಾರಿ ನಡೆಯುತ್ತಿರುವುದರಿಂದ ಡೈಮಂಡ್ ಡಿಸ್ಟ್ರಿಕ್ಟ್/ಕಾರ್ಲಟನ್ ಟವರ್ಸ್ ಹತ್ತಿರ ಸಂಚಾರವನ್ನು ಬಂದ್ ಮಾಡಿವುದಾಗಿ ತಿಳಿಸಿದರು. ಮತ್ತೊಮ್ಮೆ ಮಾತನಾಡಿ 80 ಅಡಿ ರಸ್ತೆ 13 ನೇ ಮುಖ್ಯರಸ್ತೆಯಿಂದ 13 'ಎ' ಮುಖ್ಯರಸ್ತೆವರೆಗೆ ಏಕಮುಖ ಸಂಚಾರವಿದ್ದು ಇದನ್ನು ದ್ವಿಮುಖ ಸಂಚಾರಗೊಳಿಸಲು ಕೋರಿದರು ಹಾಗೂ ಕೋಡಿಹಳ್ಳಿಯ ನಿವಾಸಿಗಳಿಗೆ ಹಳೇ ವಿಮಾನ ರಸ್ತೆಯಲ್ಲಿ ಮಿಡಿಯನ್ ಬಂದ್ ಮಾಡಿರುವುದರಿಂದ ತುಂಬಾ ತೊಂದರೆಯಾಗಿದ್ದು ಸುಮಾರು 3 ಕಿ.ಮೀ. ಸುತ್ತಾಡಿ ಕೋಡಿಹಳ್ಳಿ ತಲುಪಬೇಕಾಗಿದ್ದು ಆದುದರಿಂದ ಹಳೇ ವಿಮಾನ ರಸ್ತೆಯಲ್ಲಿ ಮಿಡಿಯನ್ ತೆರವುಗೊಳಿಸಲು ಮತ್ತೊಮ್ಮೆ ಕೋರಿದರು.ಇದಕ್ಕೆ ಅಧ್ಯಕ್ಷರು DCP ಮತ್ತು TEC ರವರಿಗೆ ಪತ್ರ ಬರೆಯಲು ಸೂಚಿಸಿದರು.

**ಆರೋಗ್ಯ ಇಲಾಖೆ :**

- ಅಧ್ಯಕ್ಷರು ಮಾತನಾಡಿ, ವಾರ್ಡ್ ವ್ಯಾಪ್ತಿಯಲ್ಲಿರುವ ಎಲ್ಲಾ ಪಾರ್ಕ್‌ಗಳಲ್ಲಿ ಫಾಗಿಂಗ್ (ಸೊಳ್ಳೆ ನಿಯಂತ್ರಣ ಔಷದ ಸಿಂಪಡಿಸುವಿಕೆ) ಮಾಡಲು ಹಿಂದಿನ ಸಭೆಯಲ್ಲಿ ತಿಳಿಸಲಾಗಿದ್ದರೂ ಸಮರ್ಪಕವಾಗಿ ಕ್ರಮ ಕೈಗೊಳ್ಳದಿರುವ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿ ಸಂಬಂಧಪಟ್ಟ ಗುತ್ತಿಗೆದಾರರಿಗೆ ಬಿಲ್ ತಡೆಹಿಡಿಯುವಂತೆ ತಿಳಿಸಿದರು. ಹಾಗೂ ಮುಂದೆ ಈ ಬಗ್ಗೆ ತ್ವರಿತವಾಗಿ ಕ್ರಮ ಕೈಗೊಳ್ಳುವಂತೆ ಸಭೆಗೆ ಹಾಜರಾಗಿದ್ದ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಿದರು.
- ವಾರ್ಡ್‌ನಲ್ಲಿರುವ PG ಗಳನ್ನು ಸರ್ವೆಮಾಡಿ ಅವರಿಗೆ ನೋಟಿಸ್ ನೀಡಲು ಸೂಚಿಸಿದರು.

**ಅರಣ್ಯ ಇಲಾಖೆ :**

- ಸಮಿತಿಯ ಸದಸ್ಯರಾದ ಶ್ರೀ.ಸದಾಶಿವನ್‌ರವರು, 18ನೇ ಸಿ ಮುಖ್ಯರಸ್ತೆ ಮತ್ತು 1ನೇ ಅಡ್ಡರಸ್ತೆಯಲ್ಲಿ ಹಾಗೂ ಶ್ರೀಮತಿ.ಕವಿತಾರವರು 13ನೇ ಮುಖ್ಯರಸ್ತೆಯಲ್ಲಿ ವಾಹನ ಸಂಚಾರಕ್ಕೆ ಅಡ್ಡಿ ಉಂಟು ಮಾಡುತ್ತಿರುವ ಮರಗಳ ರೆಂಬೆಗಳನ್ನು ಕತ್ತರಿಸಿ ತೆರವುಗೊಳಿಸಿಕೊಡಲು ಕೋರಿದ್ದ ವಿಷಯವಾಗಿ ಸಂಬಂಧಪಟ್ಟ ಅಧಿಕಾರಿಗಳು ಮಾತನಾಡಿ, ಈ ಬಗ್ಗೆ ಪತ್ರಮುಖೇನ ಕೋರಬೇಕಾಗಿರುತ್ತದೆ ಎಂದು ತಿಳಿಸಿದರು. ಅದಕ್ಕೆ ಅಧ್ಯಕ್ಷರು ಕಛೇರಿಯಿಂದಲೇ ಪತ್ರವನ್ನು ಬರೆಯುವಂತೆ ಅಭಿಯಂತರಿಗೆ ಸೂಚಿಸಿದರು.

**ಪಶುಸಂಗೋಪನಾ ಇಲಾಖೆ :**

- ಸಮಿತಿಯ ಸದಸ್ಯರಾದ ಶ್ರೀ.ಸದಾಶಿವನ್‌ರವರು, 18ನೇ ಎ, ಬಿ, ಸಿ ಮತ್ತು ಡಿ ಮುಖ್ಯರಸ್ತೆಗಳಲ್ಲಿ ನಾಯಿಗಳಿಂದ ತುಂಬಾ ತೊಂದರೆಯುಂಟಾಗುತ್ತಿರುವ ಬಗ್ಗೆ ದೂರಿದರು. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದು ಸಮಸ್ಯೆ ಪರಿಹರಿಸುವಂತೆ ಅಧ್ಯಕ್ಷರು ಸೂಚಿಸಿದರು.

**ಮಳೆನೀರುಗಾಲುವೆ :**

- ಮಳೆಗಾಲದ ಸಂದರ್ಭದಲ್ಲಿ 18ನೇ ಎ, ಬಿ, ಸಿ ಮತ್ತು ಡಿ ಮುಖ್ಯರಸ್ತೆ ಮತ್ತು 1ನೇ, 1 'ಎ', 1 'ಬಿ', ಅಡ್ಡರಸ್ತೆಗಳಲ್ಲಿ ಮಳೆನೀರುಗಾಲುವೆಯ ನೀರು ಹಿಮ್ಮುಖವಾಗಿ ನಿಂತು ನಿವಾಸಿಗಳ ಮನೆಗಳಿಗೂ ಸಹ ನೀರು ನುಗ್ಗಿ ಅನಾಹುತ ಉಂಟಾಗುತ್ತಿರುತ್ತದೆ ಎಂದು ಶ್ರೀ.ಸದಾಶಿವನ್, ಸದಸ್ಯರು ಮಾತನಾಡಿದರು. ಈ ಬಗ್ಗೆ ಅನುದಾನದ ಲಭ್ಯತೆಯ ಪರಿಶೀಲನೆ ಮಾಡಿ ಒಂದು ಮೋಟಾರ್ ಪಂಪ್ ವ್ಯವಸ್ಥೆಯನ್ನು 2-3 ತಿಂಗಳುಗಳಲ್ಲಿ ಮಾಡುವುದಾಗಿ ಮಳೆನೀರುಗಾಲುವೆ ವಿಭಾಗದ ಸಹಾಯಕ ಅಭಿಯಂತರರು ತಿಳಿಸಿದರು.

**ಕೊವಿಡ್-19 :**

- ವಾರ್ಡ್‌ನಲ್ಲಿ ಒಟ್ಟು ಇದುವರೆಗೆ 638 ಪ್ರಕರಣಗಳು ದಾಖಲಾಗಿದ್ದು ಇದರಲ್ಲಿ 589 ಪ್ರಕರಣಗಳು ಆಸ್ಪತ್ರೆಯಿಂದ ಬಿಡುಗಡೆಗೊಂಡಿದ್ದು 32 ಪ್ರಕರಣಗಳು ಸಕ್ರಿಯವಾಗಿದ್ದು ಇದುವರೆಗೂ 11 ಜನರು ಮೃತಪಟ್ಟಿದ್ದಾರೆ ಹಾಗೂ ಪ್ರತಿದಿನ 100 ರಿಂದ 130 ಪರೀಕ್ಷೆ ನಡೆಯುತ್ತಿದ್ದು ಇದರಲ್ಲಿ 3 ರಿಂದ 4 ಜನರಿಗೆ ಕೋರೊನಾ ಧೃಡಪಟ್ಟಿರುತ್ತದೆಂದು ನರ್ಸ್ ರವರು ಹೇಳಿದರು.

ವಾರ್ಡ್ ವ್ಯಾಪ್ತಿಯ ಹಲವಾರು ಕಡೆಗಳಲ್ಲಿ, ಸರಗಳ್ಳತನ ಮತ್ತಿತರ ಅನೈತಿಕ ಚಟುವಟಿಕೆಗಳು ಹೆಚ್ಚಾಗಿರುವ ಕಾರಣ ಸದರಿ ಸ್ಥಳಗಳಲ್ಲಿ ಸಿಸಿ ಕ್ಯಾಮೆರಾಗಳನ್ನು ಅಳವಡಿಸುವಂತೆ ಮಾನ್ಯ ನೋಡಲ್ ಅಧಿಕಾರಿಗಳು ತಿಳಿಸಿದರು. ಹಾಗೂ ಮೇಲ್ಕಂಡಂತೆ ತಿಳಿಸಲಾಗಿರುವ ಕುಂದುಕೊರತೆಗಳ ಬಗ್ಗೆ ಸಂಬಂಧಪಟ್ಟ ಆಯಾ ಇಲಾಖೆಯ ಅಧಿಕಾರಿಗಳಿಗೆ ಕ್ರಮವಹಿಸಲು ಮತ್ತೊಮ್ಮೆ ಸೂಚಿಸುತ್ತಾ, ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

| | |
|---|---|
| **ಕಾರ್ಯದರ್ಶಿಗಳು**<br>**ವಾರ್ಡ್ ಸಮಿತಿ-88** | 20/11/2020<br>**ಅಧ್ಯಕ್ಷರು**<br>**ವಾರ್ಡ್ ಸಮಿತಿ, ವಾರ್ಡ್ 88**<br>**ಹಾಗೂ ನೋಡಲ್ ಅಧಿಕಾರಿಗಳು,**<br>**ವಾರ್ಡ್ 88** |